ರೂ.30.26 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಯೋಚಿಸಿದ್ದು, ಶೀಘ್ರವೇ ಈ ಕಾಮಗಾರಿಗಳನ್ನು ಟೆಂಡರ್ ಕರೆದು ಕೈಗೊಳ್ಳಲಾಗುವುದು.

ಆ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಒಟ್ಟು 25 ಕೆರೆಗಳಿದ್ದು, ಕೆರೆಗಳ ಪುನರುಜ್ಜೀವನ ಯೋಜನೆ ಅಡಿಯಲ್ಲಿ 5 ಕೆರೆಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಸದರಿ ಯೋಜನೆಯಡಿಯಲ್ಲಿ ಪ್ರತಿ ಕೆರೆಗೆ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.25.00 ಲಕ್ಷಗಳನ್ನು ರಾಜಕಾಲುವೆ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿದೆ.

ಕೆರೆಗಳಲ್ಲಿನ ಹೂಳು ತೆಗೆಸುವುದು

590 (190) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂತರ್ಜಲ ವೃದ್ಧಿಗೆ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ರಾಜ್ಯದಲ್ಲಿರುವ ಎಷ್ಟು ಕೆರೆಗಳಲ್ಲಿ ಹೂಳೆತ್ತುವುದು ಅವಶ್ಯಕವಾಗಿದೆ;

ಇ) ಕೆರೆಗಳಲ್ಲಿನ ಹೂಳೆತ್ತಲು ಬೇಕಾಗುವ ಹಣವೆಷ್ಟು;

ಈ) 2011–12 ಹಾಗೂ 2012–13ರಲ್ಲಿ ಖರ್ಚು ಮಾಡಿದ ಹಣವೆಷ್ಟು;

ಉ) ಕೆರೆಗಳಲ್ಲಿನ ಹೂಳು ತೆಗೆಯಲು ಹೆಚ್ಚಿನ ಹಣ ಬಿಡುಗಡೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ರಾಜ್ಯದಲ್ಲಿ ನೀರಾವರಿ ಸೌಲಭ್ಯ ಸ್ಥಿರೀಕರಿಸಲು / ಪುನರ್ ಸ್ಥಾಪಿಸಲು ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಕಾಲ ಕಾಲಕ್ಕೆ ಅನುದಾನದ ಲಭ್ಯತೆಗನುಗುಣವಾಗಿ ವಿವಿಧ ಕಾರ್ಯಕ್ರಮದಡಿ ಆಯ್ದ ಕೆರೆಗಳಲ್ಲಿ ಕೈಗೊಳ್ಳ ಲಾಗುತ್ತಿದೆ. ಇದರಿಂದಾಗಿ ಪರೋಕ್ಷವಾಗಿ ಅಂತರ್ಜಲ ವೃದ್ಧಿಯಾಗಲು ಸಹಾಯಕವಾಗುತ್ತದೆ.

ಆ) ರಾಜ್ಯದಲ್ಲಿರುವ ಬಹುತೇಕ ಕೆರೆಗಳಲ್ಲಿ ಹೂಳೂ ಸಂಗ್ರಹಣೆಯಾಗಿದೆ. ಹೂಳೆತ್ತುವುದೂ ಸೇರಿದಂತೆ ಕೆರೆಗಳ ಪುನಃಶ್ಚೇತನ ಕಾರ್ಯವು ನಿರಂತರವಾದ ಪ್ರಕ್ರಿಯೆಯಾಗಿದ್ದು, ಕಾಲ ಕಾಲಕ್ಕೆ ಎಲ್ಲಾ ಕೆರೆಗಳಲ್ಲಿ ಹೂಳೆತ್ತುವುದು ಅವಶ್ಯಕವಾಗಿದೆ.

ಇ) ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿರುವ ಎಲ್ಲಾ ಕೆರೆಗಳ ಯೋಜಿತ ನೀರಿನ ಸಂಗ್ರಹಣಾ ಸಾಮರ್ಥ್ಯ 99.152 ಟಿ.ಎಂ.ಸಿ. ಅಡಿ ಆಗಿದೆ. ಹೂಳಿನ ಸಂಗ್ರಹಣೆಯಿಂದಾಗಿ ಶೇಕಡ 25 ರಿಂದ 30 ರಷ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿರುವುದಾಗಿ ಅಂದಾಜಿಸಲಾಗಿದೆ. ಅಂದರೆ ಸುಮಾರು 30 ಟಿ.ಎಂ.ಸಿ. ಅಡಿ ಸಣ್ಣ ನೀರಾವರಿ ಇಲಾಖೆಯು ಕೆರೆಗಳ ಸಂಪೂರ್ಣ ಹೂಳೆತ್ತುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ. ಸಂಪೂರ್ಣ ಹೂಳನ್ನು ತೆಗೆಯಲು ಬೃಹತ್ ಗಾತ್ರದ ಮೊತ್ತದ ಅವಶ್ಯಕತೆ ಇರುವುದರಿಂದ, ವಿವಿಧ ಯೋಜನೆಗಳಡಿ ಲಭ್ಯವಾಗುವ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿಯೂ ಸೇರಿದಂತೆ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಈ) ವಿವಿಧ ಯೋಜನಾ ಲೆಕ್ಕ ಶೀರ್ಷಿಕೆಗಳಡಿ 2011–12 ನೇ ಸಾಲು ಹಾಗೂ 2012–13ನೇ ಸಾಲಿನ ಜೂನ್ ಮಾಹೆ ಅಂತ್ಯಕ್ಕೆ ಕೆರೆಗಳ/ಸಣ್ಣ ನೀರಾವರಿ ಯೋಜನೆಗಳ ಅಭಿವೃದ್ಧಿಗಾಗಿ ಮಾಡಿರುವ ವೆಚ್ಚದ ವಿವರಗಳು ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಲೆಕ್ಕ ಶೀರ್ಷಿಕೆ	2011–12ನೇ ಸಾಲಿನ ವೆಚ್ಚ	2012–13ನೇ ಸಾಲಿನಲ್ಲಿ ಜೂನ್ ಮಾಹೆಯ ಅಂತ್ಯಕ್ಕೆ ವೆಚ್ಚ
1	2	3	4
ಅ) ಕೇಂದ್ರ ಪುರಸ್ಕೃತ ಯೋಜನೆಗಳು			
1	4702–00–101–1–09–132 ಕೃಷಿಗೆ ನೇರವಾಗಿ ಸಂಬಂಧಿಸಿದ ನೀರಾವರಿ ಯೋಜನೆಗಳ ದುರಸ್ತಿ ನವೀಕರಣ ಮತ್ತು ಪುನರುಜ್ಜೀವನ ರಾಷ್ಟ್ರೀಯ ಯೋಜನೆ	8,851.00	481.67

2(ಅ)	4702–00–101–1–12–059–XIII ನೇ ಹ ಆ ಅನುದಾನ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ–ಇತರ ಖರ್ಚುಗಳು	1323.56	1,027.69
(ಆ)	4702–00–101–1–12–422– XIII ನೇ ಹ ಆ ಅನುದಾನ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ–ವಿಶೇಷ ಘಟಕ ಯೋಜನೆ	280.89	
(ಇ)	4702–00–101–1–12–423– XIII ನೇ ಹ ಆ ಅನುದಾನ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ–ಗಿರಿಜನ ಉಪ ಯೋಜನೆ	113.56	
	ಅ–ಒಟ್ಟು ಮೊತ್ತ	**10,569.01**	**1,509.36**
ಆ–ರಾಜ್ಯ ಯೋಜನೆಗಳು			
3	4702–00–101–1–07–436 ಕೆರೆಗಳ ಆಧುನೀಕರಣ–ನಬಾರ್ಡ್	2,390.49	357.91
4	4702–00–101–1–06–139 ಹಳೆಯ ಮತ್ತು ಒಡೆದ ಕೆರೆಗಳ ಜೀರ್ಣೋದ್ಧಾರ ಮತ್ತು ಕೆರೆಯ ಹೂಳೆತ್ತುವುದು	37.07	
5	4702–00–101–1–07–139 ಕೆರೆಗಳ ಆಧುನೀಕರಣ	2,699.69	876.58
6	4702–00–101–1–13–132– ಕೆರೆಗಳ ದುರಸ್ತಿ ಮತ್ತು ಪುನಃಶ್ಚೇತನ	8,226.02	143.07
7	4702–00–101–2–80–139 ಕರ್ನಾಟಕ ಕೆರೆ ಅಭಿವೃದ್ಧಿ ಯೋಜನೆ (ಜಲ ಸಂವರ್ದನೆ ಯೋಜನೆ ಸಂಘ) ಪ್ರಧಾನ ಕಾಮಗಾರಿಗಳು	26,391.17	2,230.28
	ಆ–ರಾಜ್ಯ ಯೋಜನೆಗಳು ಒಟ್ಟು	**39,744.44**	**3,607.84**
	ಒಟ್ಟು	**50,313.45**	**5,117.20**

ಉ) ಪ್ರತಿ ವರ್ಷ ಲಭ್ಯವಾಗುವ ಅನುದಾನದಲ್ಲಿ ಆಧ್ಯತೆಯ ಮೇಲೆ ಹೂಳೆತ್ತುವ ಕಾರ್ಯವು ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ವಿಷ್ಣು ಸಮುದ್ರ ಕೆರೆ

599 (783) ಶ್ರೀ ರುದ್ರೇಶ್‌ಗೌಡ ವೈ.ಎನ್. (ಬೇಲೂರು) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವವಿಖ್ಯಾತ ಬೇಲೂರಿನಲ್ಲಿ ವಿಷ್ಣು ಸಮುದ್ರ ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವುದೇ;

ಆ) ಈ ಕೆರೆಯಲ್ಲಿ ಬೇಲೂರು ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳು ಸ್ನಾನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕೆರೆಯನ್ನು ಸ್ವಚ್ಛಗೊಳಿಸಿ ಇಲ್ಲಿ ಸನ್ಮಾನ ಮಾಡುವ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಪರ್ಯಾಯವಾಗಿ ಮೂಲಭೂತ ಸೌಲಭ್ಯ ಒದಗಿಸುವುದು ಸರ್ಕಾರದ ಕರ್ತವ್ಯವಲ್ಲವೇ;

ಈ) ಸದರಿ ಕೆರೆಯ ಅಭಿವೃದ್ಧಿಗೆ ಹಾಗೂ ಭಕ್ತಾಧಿಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಹೌದು.

ಆ) ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳು ವಿಷ್ಣುಸಮುದ್ರ ಕೆರೆಯಲ್ಲಿ ಸ್ನಾನ ಮಾಡುತ್ತಿಲ್ಲ. ಆದರೆ ಸದರಿ ಕೆರೆಯ ಅಂಚಿನಲ್ಲಿರುವ ದೇವಸ್ಥಾನ ನಿರ್ಮಾಣದ ಸಮಯದಲ್ಲಿ ನಿರ್ಮಿಸಲಾದ ಸ್ನಾನಘಟ್ಟ ಹಾಗೂ ಕಲ್ಯಾಣಿಯಲ್ಲಿ ಸ್ನಾನ ಮಾಡುತ್ತಿರುತ್ತಾರೆ. ಈ ಕಲ್ಯಾಣಿಯ ನಿರ್ವಹಣೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಇ) ಭಕ್ತಾದಿಗಳು ಸ್ನಾನ ಮಾಡುವ ವಿಷ್ಣುಸಮುದ್ರ ಕೆರೆ ಅಂಚಿನಲ್ಲಿರುವ ಸ್ನಾನಘಟ್ಟವು ಈ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಆದರೆ ಚನ್ನಕೇಶವಸ್ವಾಮಿ ದೇವಸ್ಥಾನದ ಸಮಿತಿಯವರ ಕೋರಿಕೆಯಂತೆ ಪ್ರತಿ